ಅಧ್ಯಕ್ಷರು.—ಮಾನ್ಯ ಸಚಿವರಾದ ಪಟೇಲ್ ಅವರು ಮೇಲ್ಮನೆಗೆ ಹೋಗಬೇಕಾಗಿದೆ. ಆದ್ದರಿಂದ ಈಗ ಮಾನ್ಯ ಪಾಟೇಗೌಡರು ಕೊಟ್ಟಿರುವ ಪ್ರಿವಿಲೇಜ್ ನೋಟೀಸ್‌ನ್ನು ಈಗ ತೆಗೆದುಕೊಳ್ಳುತ್ತೇನೆ. ಮಾನ್ಯ ಮಾದೇಗೌಡರು ಈಗ ತಮ್ಮ ನೋಟೀಸ್ ಬಗ್ಗೆ ಪ್ರಸ್ತಾಪ ಮಾಡಬಹುದು.

ಹಕ್ಕುಚ್ಯುತಿ ನಿರ್ಣಯ

ಶ್ರೀ ಜಿ. ಮಾದೇಗೌಡ (ಕಿರುಗಾವಲು).—ಮಾನ್ಯ ಅಧ್ಯಕ್ಷರೇ, ನನ್ನ ವಿಧಾನಸಭೆಯ ನಿಯಮ ೧೯೭ ರ ಪ್ರಕಾರ ಮಾನ್ಯ ಕೈಗಾರಿಕಾ ಸಚಿವರು ಈ ಸದನಕ್ಕೆ ಮತ್ತು ಈ ಮನೆಯ ಸದಸ್ಯರ ಹಕ್ಕನ್ನು ಚ್ಯುತಿ ಮಾಡಿದ್ದಾರೆಂಬ ವಿಷಯವನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ. ಇದು ಮಾನ್ಯ ಪಟೇಲ್ ಅವರಿಗೂ ಗೊತ್ತಿದೆ ಇದರ ಚರಿತ್ರೆ ಸಹ ಅವರಿಗೆ ಗೊತ್ತಿದೆ. ಚಾಮುಂಡೇಶ್ವರಿ ಸಕ್ಕರೆ ಕಂಪನಿಯ ಅಧ್ಯಕ್ಷರು ಸರ್ಕಾರದೊಂದಿಗೆ ರಾಜ್ಯದ ಹಣಕಾಸು ಸಂಸ್ಥೆಗಳು ಉದಾಹರಣೆಗೆ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮ ಹಾಗೂ ಮೈಸೂರು ಸಕ್ಕರೆ ಕಾರ್ಖಾನೆಯವರು ಖರೀದಿಸಿರುವ ಶೇರುಗಳನ್ನು ತಾವು ಖರೀದಿಸುವಂತೆ ಸರ್ಕಾರದೊಂದಿಗೆ ಪರಿಶೀಲಿಸುತ್ತಿರುವುದು ನಿಜವೇ ಎಂದು ನಾನು ದಿನಾಂಕ ೮-೮-೮೫ರಂದು ಕೇಳಿದ ಪ್ರಶ್ನೆಗೆ ಉತ್ತರವಾಗಿ ಇದೇ ಮಾನ್ಯ ಮಂತ್ರಿಗಳು ಅಂತಹ ಪರಿಸ್ಥಿತಿ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಈ ಮಾತನ್ನು ತಾವು ಈಗ ಒಪ್ಪುತ್ತೀರಿ ಎಂದೂ ಭಾವಿಸುತ್ತೇನೆ. ಮತ್ತೆ ನಾನು ಈ ಸಕ್ಕರೆ ಕಂಪನಿಯ ಬಂಡವಾಳ ಜಾಸ್ತಿ ಇರುವುದರಿಂದ ಈ ಕಂಪನಿಯು ಆಡಳಿತ ರೈತರ ವಶಕ್ಕೆ ಬರಬೇಕೆಂದು ಪುನಃಪುನಃ ಒತ್ತಾಯ ಮಾಡಿ ಕೇಳಿದಾಗ ಮಾನ್ಯ ಮಂತ್ರಿಗಳು ಉತ್ತರ ರೂಪದಲ್ಲಿ ''ನಾನು ಆ ಪ್ರಿನ್ಸಿಪಲ್‌ನ್ನು ಒಪ್ಪುತ್ತೇನೆ, ಅದನ್ನು ಯಾವಾಗ ಮಾಡಬೇಕು ಹೇಗೆ ಮಾಡಬೇಕು ಎಂಬುದನ್ನು ಸರ್ಕಾರಕ್ಕೆ ಬಿಡಿ'' ಎಂದು ಉತ್ತರ ಕೊಟ್ಟಿದ್ದಾರೆ ಈ ಉತ್ತರವನ್ನು ಇಂದು ತಾವು ಒಪ್ಪುತ್ತೀರಿ ಎಂದು ನಾನು ಅಂದುಕೊಳ್ಳುತ್ತೇನೆ. ಈ ಕಂಪನಿಯಲ್ಲಿ ಸರ್ಕಾರದ ಷೇರು ಹಣ ಕೂಡ ಇದೆ. ಇದು ಸರ್ಕಾರದ ಕೆಂಪನಿ ಮಾನ್ಯ ಮಂತ್ರಿಗಳ ಹತ್ತಿರ ಇದಕ್ಕೆ ಸಂಬಂಧಪಟ್ಟ ಎಲ್ಲಾ ಮಾಹಿತಿಗಳು ಸಹ ಇವೆ. ಆದ್ದರಿಂದ ಈ ಕಂಪನಿಯ ಎಲ್ಲಾ ಮಾಹಿತಿಗಳು ತಮಗೆ ತಿಳಿದಿದೆ. ಈ ಸಕ್ಕರೆ ಕಾಪನಿಯನ್ನು ಖಾಸಗೀಯವರಿಗೆ ಮಾರಾಟ ಮಾಡುವ ಉದ್ದೇಶ ಏನಾದರೂ ಇದೆಯೇ ಎಂದು ಈ ಹಿಂದೆ ತಮ್ಮನ್ನು ಕೇಳಿದಾಗ ತಾವು ಖಂಡಿತ ಇದನ್ನು ಖಾಸಗಿಯವರಿಗೆ ಮಾರಾಟ ಮಾಡುವುದಿಲ್ಲ ಎಂದು ಹೇಳಿದಿರಿ. ಇದು ಕೋ-ಆಪರೇಟಿವ್ ಸೆಕ್ಟಾರ್‌ನಲ್ಲಿದೆ.

ಇದರಲ್ಲಿ ಸ್ಪಷ್ಟವಾಗಿ ನಾನು ಕೊಟ್ಟಿದ್ದೇನೆ. ಈ ಛೇರ್ಮನ್ ಮಹಾಲಿಂಗಂರವರ ಷೇರ್ ಕೇವಲ ೬೫ ಸಾವಿರ ರೂಪಾಯಿಗಳು ಅವರು ಹೂಡಿರತಕ್ಕಂಥಾದ್ದು. ಅವರದು ತಮಿಳುನಾಡಿನಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ, ಅವರ ಫಾದರ್ ನನಗೆ ಗೊತ್ತು. ಆದರ ಮುಖಾಂತರ ಅವರು ಹೂಡಿರತಕ್ಕಂಥಾದ್ದು ೨೪ ಲಕ್ಷ ರೂಪಾಯಿಗಳು ಆದರೆ ೧೦೦ಕ್ಕೆ ೧೩ ಪರ್ಸೆಂಟ್ ಷೇರ್ ಅವರದು ಇರತಕ್ಕಂಥಾದ್ದು. ಇವತ್ತು ನಮ್ಮ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಷೇರ್ಸ್ ಎಷ್ಟಿದೆ ಅಂದರೆ ಕೇಂದ್ರ ಸರ್ಕಾರದ ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್ಸ್‌ನಿಂದ ೨೫ ಪರ್ಸೆಂಟ್ ಇದೆ. ಕಾಲು ಭಾಗ ಇದೆ, ಅದರಲ್ಲಿಯೂ ನಾನು ತಮಗೆ ಮಾಹಿತಿ ಕೊಟ್ಟಿದ್ದೇನೆ ಮತ್ತು ಸ್ಟೇಟ್ ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್ಸ್‌ನಿಂದ ಹಣ ಪಿನಿತ್ತು ಅದನ್ನು ನೀವು ಮಾನಿಕೊಂಡಿದ್ದೀರಿ, ಅದು ೧೦ ಪರ್ಸೆಂಟ್ ಇದೆ. ಬಹುಶಃ ಎರಡು ಸರ್ಕಾರಗಳ ಹಣಕಾಸಿನ ಸಂಸ್ಥೆಗಳಿಂದ ಸುಮಾರು ೩೫ ಪರ್ಸೆಂಟ್ ಷೇರ್ ಇದೆ. ಮತ್ತು ರೈತರ ಷೇರ್ ೪೨ ಪರ್ಸೆಂಟ್ ಇದೆ. ನಾನು ಮಾನ್ಯ ಪಟೇಲರನ್ನು ಈ ವಿಷಯಕ್ಕೆ ಸಂಬಂಧಪಟ್ಟಂತೆ ಅನೇಕ ಬಾರಿ ಪ್ರತ್ಯೇಕವಾಗಿ ಹೋಗಿ ಕೇಳಿದ್ದೇನೆ. ಅವರು ನನಗೆ ಬಹಳ ಆಶ್ವಾಸನೆ ಕೊಟ್ಟರು. ಅವರ ಮಾತಿನಲ್ಲಿ ವಿಶ್ವಾಸ ಇಟ್ಟುಕೊಂಡಿದ್ದೆ. ಅವರು ಸಮಾಜವಾದಿಗಳು ಮತ್ತು ರೈತರ ಕಷ್ಟಸುಖಗಳನ್ನು ತಿಳಿದುಕೊಂಡಿದ್ದಾರೆ. ರೈತ ಕುಟುಂಬದಿಂದ ಬಂದಿರತಕ್ಕವರು, ವ್ಯವಸಾಯವನ್ನೇ ವೃತ್ತಿಯನ್ನಾಗಿಟ್ಟು ಕೊಂಡಿರುವುದರಿಂದ ಅವರಿಗೆ ರೈತರ ಪರಿಸ್ಥಿತಿ ಚೆನ್ನಾಗಿ ಗೊತ್ತು ಎಂದು ಕೇಳಿದರೆ, ಅವರು ನನಗೆ ಒಂದು ಆಶ್ವಾಸನೆ ಕೊಟ್ಟರು. ನಾನು ಇದೇ ಕಾರಣಕ್ಕೋಸ್ಕರ ಈ ಕಂಪನಿಯ ಆಡಳಿತವನ್ನು ಬಂಡವಾಳ ಶಾಹಿಗಳಿಗೆ ಕೊಡುವುದಿಲ್ಲ, ಇದು ಎಂದಿದ್ದರೂ ಕೂಡ ರೈತರ ಮತ್ತು ಸರ್ಕಾರದ ಷೇರುಗಳು ಇಲ್ಲಿ ಇರುವುದರಿಂದ ಇದನ್ನು ರೈತರ ವಶಕ್ಕೆ ಒಪ್ಪಿಸುವುದಕ್ಕೆ ನಾನು ಪ್ರಯತ್ನ

ಮಾಡುತ್ತೇನೆ. ಅದಕ್ಕೆ ಕಾಲಾವಕಾಶ ಮಾತ್ರ ಕೊಡಬೇಕು ಎನ್ನತಕ್ಕಂಥ ಮಾತನ್ನು ಹೇಳಿದರು. ನನಗೆ ಇದು ಇನ್ನೂ ಚ್ಲಾಪಕ. ಅವರು ಲೋಹಿಯಾರವರ ಸ್ನೇಹಿತರು, ಗೋಪಾಲಗೌಡರ ಕೈಮೇಲೆ ಕೈ ಇಟ್ಟುಕೊಂಡಿರತಕ್ಕ ಫೋಟೋ ಅವರ ಮನೆಯಲ್ಲಿದೆ. ಮಾನ್ಯ ಶಿವಪ್ಪನವರೂ ಬಂದಿದ್ದರು. ನಾವೆಲ್ಲಾ ರೈತರಿಗೆ ತೊಂದರೆ ಮಾಡತಕ್ಕದ್ದು ಸರಿಯಲ್ಲ ಎಂದೆಲ್ಲಾ ಹೇಳಿದೆವು. ಅವರು ಹೇಳಿದರು, ಇದು ಒಂದು ಸೀಸನ್, ನಿಮ್ಮ ಆಡಳಿತವನ್ನು ಬದಲಾವಣೆ ಮಾಡುವುದಿಲ್ಲ, ನೀವು ನಡೆಸಿ ಎನ್ನತಕ್ಕಂಥ ಮಾತನ್ನು ಕೊಟ್ಟಿದ್ದೇನೆ. ಈ ಒಂದು ಸೀಸನ್ ಸುಮ್ಮನೆ ಇರಿ, ನಾನು ಆ ಕಂಪೆನಿ ರೈತರ ವಶಕ್ಕೆ ಬರುವ ರೀತಿಯಲ್ಲಿ ಮಾಡುತ್ತೇನೆ ಎಂದು ಹೇಳಿದರು. ಅದೇ ಮಾತನ್ನು ಆಪೊತ್ತು ನನ್ನ ಪ್ರಶ್ನೆಗೆ ಉತ್ತರವಾಗಿ ಕೂಡ ಹೇಳಿದ್ದಾರೆ ಅವರು ಏನು ಹೇಳಿದ್ದಾರೆ ಎಂದರೆ, ಮಾನ್ಯ ಸದಸ್ಯರು ಪುನಃ ಪುನಃ ಏನು ಪ್ರಸ್ತಾಪ ಮಾಡುತ್ತಿದ್ದಾರೆ. ಅಂದರೆ ಆಡಳಿತ ವ್ಯವಸ್ಥೆಯಲ್ಲಿ ಈ ಕಂಪೆನಿ ಹೆಸರಿನಲ್ಲಿ ರೈತರ ಮತ್ತು ಸರ್ಕಾರದ ಷೇರುಗಳು ಅಧಿಕವಾಗಿರುವುದನ್ನು ನಾನು ಒಪ್ಪುತ್ತೇನೆ. ಈ ಕಂಪೆನಿ ಆಡಳಿತವು ರೈತರ ವಶಕ್ಕೆ ಹೋಗಬೇಕೆಂಬ ಪಿನ್ಸಿಪಲನ್ನು, ಪ್ರಜಾಸತ್ತಾತ್ಮಕವಾದಂಥ ರೀತಿಯಲ್ಲಿ ನಡೆಯಬೇಕು ಎನ್ನತಕ್ಕಂಥ ಪಿನ್ಸಿಪಲನ್ನು ನಾನು ಒಪ್ಪಿಕೊಂಡಿದ್ದೇನೆ ಎಂದು ಹೇಳಿದ್ದಾರೆ. ಮತ್ತೆ ಇನ್ನೊಂದು ಕಾಲದಲ್ಲಿ ನನಗೆ ಪತ್ರೇಕವಾಗಿ ಬರೆದಿದ್ದಾರೆ. ಅದನ್ನೂ ಕೂಡ ನಾನು ಲಗತ್ತಿಸಿದ್ದೇನೆ. ಅವರು ಏನು ಬರೆದಿದ್ದಾರೆ ಎಂದರೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಬರೆದು ನನಗೆ ಪ್ರತಿಯನ್ನು ಕಳಿಸಿದ್ದಾರೆ. ತಮ್ಮ ಪತ್ರದಲ್ಲಿನ ಕೋರಿಕೆಯಂತೆ ಭಾರತೀಯ ಸಂವಿಧಾನಾತ್ಮಕವಾದಂಥ ದೃಷ್ಟಿಯಿಂದ ಕೆ. ಎಂ. ದೊಡ್ಡಿ ಪ್ರದೇಶದ ರೈತರ ಹಿತಾಸಕ್ತಿಯನ್ನು ಗಮನದಲ್ಲಿರಿಸಿ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ವ್ಯವಸ್ಥಾಪಕ ವೃಂದದಲ್ಲಿ ಮಾರ್ಪಾಡು ತರಬೇಕೆಂಬ ತಮ್ಮ ಸಲಹೆಯನ್ನು ಸೂಕ್ತ ರೀತಿಯಲ್ಲಿ ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳುವುದು. ಈ ಪತ್ರವನ್ನೂ ಕೂಡ ತಾವು ಬರೆದಿದ್ದೀರಿ. I am more democratic. I respect democratic principles ಎಂದು ನಾನು ಭಾವಿಸಿಕೊಳ್ಳುವುದು.

ಈ ರೀತಿ ಅವರು ಹೇಳಿದ್ದಾರೆ ಇದಕ್ಕಿಂತ ಮುಂಚಿತವಾಗಿ ಈ ಪ್ರಶ್ನೆಯನ್ನು ಈ ಸದನದಲ್ಲಿ ನಾನು ಕೇಳಿದ್ದೆ. ಅವರು ಇದನ್ನು ಮಾಡುವುದಿಲ್ಲ ಎನ್ನತಕ್ಕ ಮಾತನ್ನು ಹೇಳಿದ್ದರು. ಇಷ್ಟೆಲ್ಲಾ ಆದರೂ ಕೂಡ ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಷೇರು ಬಂಡವಾಳ ೨೫ ಪರ್ಸೆಂಟ್. ರೈತರ ಬಂಡವಾಳ ಹೆಚ್ಚಿಗೆ ಇಲ್ಲದಿದ್ದರೂ ಕೇವಲ ಬಂಡವಾಳ ಶಾಹಿಗಳಿಗೆ ಮಾರುವುದಿಲ್ಲವೆಂದು ಈ ಸದನಕ್ಕೆ ಆಶ್ವಾಸನೆ ಕೊಟ್ಟಿದ್ದರು. ಈ ಆಶ್ವಾಸನೆಯನ್ನು ಅವರು ಮರೆತ್ತಿದ್ದಾರೆಂದು ವಿಧಿಯಿಲ್ಲದೆ ಹೇಳಬೇಕಾಗಿದೆ. ಇಡೀ ದೇಶವೇ ಹಾಗೆ ಆಗಿದೆ, ಒಂದು ರೀತಿಯ ಗಾಳಿ ಬೀಸುತ್ತಿದೆ. ಬಂಡವಾಳ ಶಾಹಿಗಳ ಬಲೆಗೆಎಷ್ಟೆ ತತ್ವ ದೃಷ್ಟಿ ಇಟ್ಟುಕೊಂಡಿರುವವರು ಬಲಿಯಾಗತಕ್ಕಂಥ ನಿದರ್ಶನಗಳು ನೂರಾರು ಇವೆ. ಹೀಗಾಗಿ ನೀತಿಯನ್ನು ಏತಕ್ಕೆ ಮುರಿದರು ಎನ್ನುವ ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟ ಪಡುತ್ತೇನೆ. ಇವೊತ್ತು ಈ ವಿಚಾರದಲ್ಲಿ ನಾನು ಏನು ಅರ್ಥ ಮಾಡಿಕೊಳ್ಳಬಲ್ಲನೆಂದರೆ ಕೇಂದ್ರ ಮತ್ತು ರಾಜ್ಯಸರ್ಕಾರಗಳವರು ಇದರ ಬಗ್ಗೆ ಆಸಕ್ತಿ ತೋರಿಸದೆ ಇರುವುದರಿಂದ ಸುಮಾರು ೫೫೦–೪೦೦ ಜನರ ರೈತರ ಹಿತವನ್ನು ಈ ಒಂದು ಸಕ್ಕರೆ ಕಂಪನಿ ಕಾಪಾಡದೆ ದುರುಪಯೋಗ ಮಾಡುತ್ತಿದೆ. ನಮ್ಮನ್ನು ಬಿಟ್ಟರೆ ಈ ದೇಶದಲ್ಲಿ ಬಂಡವಾಳ ಶಾಹಿಗಳು ಕೈಗಾರಿಕೆಗಳನ್ನು ನಡೆಸುವವರು ಯಾರೂ ಇಲ್ಲ ಎನ್ನುವ ಮಾತನ್ನು ನಂಬಿಕೊಂಡು ಈ ರೀತಿ ಮಾಡಿದ್ದಾರೆ. ವಸ್ತುಸ್ಥಿತಿಯನ್ನು ಮಂತ್ರಿಗಳು ಅರ್ಥ ಮಾಡಿಕೊಂಡಿದ್ದರೆ ಅದಕ್ಕೆ ಕೈ ಹಾಕುತ್ತಿರಲಿಲ್ಲ. ಇವತ್ತು ನಮ್ಮ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಧೋರಣೆ ವಿರುದ್ಧ ಸಿಡಿದೆದ್ದ ರೈತರು ರಾಜ್ಯದ ಶ್ರೇಷ್ಟ ನ್ಯಾಯಾಲಯದಲ್ಲಿ ದಾವ ಹೂಡಿದ್ದಾರೆ. ರೈತರ ಷೇರು ೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿಲ್ಲ. ನಿಮ್ಮ ಹತ್ತಿರ ಬಂದು ಅನೇಕ ಸಾರಿ ಹೇಳಿದ್ದೇನೆ. ಸಕ್ಕರೆ ಕಂಪನಿಯವರು ರೈತರ ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಅವರನ್ನು ಪಜಿಸಿಕೂಷನ್ ಮಾಡಬೇಕೆಂದು ಅನೇಕ ಸಾರಿ ಹೇಳಿದ್ದೇನೆ. ೫೦ ಲಕ್ಷ ರೂಪಾಯಿಗಳ ರೈತರ ಷೇರುಗಳನ್ನು ತೆಗೆದುಕೊಂಡು ಮೆಜಾರಿಟಿ ಷೇರುಗಳನ್ನು ಮಾಡಿಕೊಂಡು ಆಡಳಿತವನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಂಡು ರಾಜಕಾರಣಿಗಳ ಪ್ರಭಾವದಿಂದ ಸರ್ಕಾರದ ಪ್ರಭಾವದಿಂದ ಇದು ರೈತರ ಕೈಬಿಟ್ಟು ಹೋಗತಕ್ಕಂಥ ಪರಿಸ್ಥಿತಿ ಇದೆ. ಕೆಎಸ್‌ಐಡಿಸಿ ಸಂಸ್ಥೆಯ ಇಬ್ಬರು ಡೈರೆಕ್ಟರುಗಳು ಇದ್ದಾರೆ. ಅವರು ಕಣ್ಣು ಮುಚ್ಚಿಕೊಂಡು ಕುಳಿತಿದ್ದಾರೆ. ಈ ವಿಷಯ ಅವರಿಗೂ ಗೊತ್ತು, ಸರ್ಕಾರಕ್ಕೂ ಗೊತ್ತು, ಶ್ರೇಷ್ಟ ನ್ಯಾಯಾಲಯದಲ್ಲಿ ಈ ವಿಷಯ ಇರುವಾಗ ಷೇರುಗಳನ್ನು ಮಾರಾಟ ಮಾಡಬೇಕಾದರೆ ಇದರ ಉದ್ದೇಶ ಏನು ಎಂದು ಕೇಳಬೇಕಾದಕ್ಕೆ ನಾನು ಇಚ್ಛೆಪಡುತ್ತೇನೆ ೧೯೭೪ರಲ್ಲಿ ಸುಪ್ರೀಂ ಕೋರ್ಟಿನಲ್ಲಿ

ಒಂದು ರೂಲಿಂಗ್ ಕೊಟ್ಟಿದ್ದಾರೆ. ಇದು ನನ್ನ ಆಸ್ತಿಯಲ್ಲ. ಪಟೇಲರ ಆಸ್ತಿಯಲ್ಲ. ೧೩ ಲಕ್ಷ ರೂಪಾಯಿಗಳಿಗೆ ಏನು ಮಾರಾಟ ಮಾಡಿದ್ದಾರೆ. ಇದು ಯಾವ ವ್ಯಕ್ತಿಯ ಆಸ್ತಿಯೂ ಅಲ್ಲ. ನಮ್ಮ ಆಸ್ತಿಯನ್ನಾದರೂ ಕೂಡ ನಾವು ಮಾರಾಟ ಮಾಡಬೇಕಾದರೆ ನನಗೆ ಅಧಿಕಾರ ಇಲ್ಲ. ನನ್ನ ಹೆಂಡತಿ ಮಕ್ಕಳು ಅಣ್ಣತಮ್ಮಂದಿರನ್ನು ಕೇಳಬೇಕಾಗುತ್ತದೆ. ನಾನು ಒಬ್ಬನೇ ನನ್ನ ಆಸ್ತಿಯನ್ನು ಮಾರಾಟ ಮಾಡಲಿಕ್ಕೆ ಆಗುವುದಿಲ್ಲ. ಈ ದೇಶದ ಆಸ್ತಿಯನ್ನು ಮಾನ್ಯ ಜೆ. ಹೆಚ್. ಪಟೇಲರು ಮಾರಾಟ ಮಾಡಿರತಕ್ಕಂಥದ್ದು ನೋಡಿದಾಗ ಬಹುಸಃ ನೀವು ಇದನ್ನು ನಿಮ್ಮ ಸ್ವಂತ ಆಸ್ತಿ ಎಂದು ತಿಳಿದುಕೊಂಡು ಮಾರಿರಬಹುದು ಎಂದು ಹೇಳಬೇಕಾಗಿದೆ. ಸುಪ್ರೀಂ ಕೋರ್ಟ್ ರೂಲಿಂಗ್ ಕೊಟ್ಟಿದ್ದಾರೆ.

"The Government cannot sell away the Government property without following any procedure."

They have not followed any procedures. ಬಂದರು ಕೇಳಿದರು, ಇದಕ್ಕೆ ಕಾರಣ ಏನು ಅಧ್ಯಕ್ಷರೆ. ನಾವು ಇದನ್ನು ಪೇಪರ್‌ನಲ್ಲಿ ನೋಡಿದೆವು ಕೆ.ಎಸ್.ಐ.ಡಿ.ಸಿ. ಅವರು ೧೩ ಲಕ್ಷ ರೂಪಾಯಿಗೆ ಯಾವುದೋ ಒಂದು ಟ್ರಾನ್ಸ್‌ಪೋರ್ಟ್ ಕಂಪನಿಗೆ ಮಾರಾಟ ಮಾಡಿದ್ದಾರೆ ಎಂದು. ಈ ಬಗ್ಗೆ ಕೆ.ಎಸ್.ಐ.ಡಿ.ಸಿ. ಅವರಿಗೆ ಒಂದು ಕಾಪಿ ಇದ್ದರೆ ಕೂಡಿ ಸ್ವಾಮಿ, ನಿಮ್ಮ ಎಷ್ಟು ಷೇರು ಇತ್ತು, ಎಷ್ಟಕ್ಕೆ ಮಾರಿದಿರಿ, ಯಾವ ರೇಟಿನಲ್ಲಿ ಮಾರಿದಿರಿ ಎಂದು ಕೇಳಿದರೆ ಅವರು ನನಗೆ ಒಂದು ಎಂಡಾರ್ಸ್‌ಮೆಂಟ್ ಕೂಡ ಕೊಡಲಿಕ್ಕೆ ಆಗಲಿಲ್ಲ. ಇದರಲ್ಲಿ ಕದ್ದ ವ್ಯಾಪಾರ ಏನು ? ಸರ್ಕಾರದ ವ್ಯವಹಾರ ಬಹಿರಂಗವಾಗಿ ಆಗತಕ್ಕಂಥ ವ್ಯವಹಾರ ಮುಚ್ಚುಮರೆಯಲ್ಲಿ ಆಗುವಂಥಾದು ಅಲ್ಲ. ಇದು ಸಾರ್ವಜನಿಕ ಸಂಸ್ಥೆ ಇದೆ. ಆ ಸಂಸ್ಥೆಯಲ್ಲಿ ಏನು ವ್ಯವಹಾರ ನಡೆದಿದೆ ಎಂದು ಈ ದೇಶದ ಪ್ರಜೆಯಾಗಿ ನೀವು ಎಷ್ಟಕ್ಕೆ ಮಾರಿದಿರಿ ನನಗೆ ಒಂದು ಕಾಪಿಯನ್ನು ಕೊಡಿ ಎಷ್ಟು ಷೇರು ಇತ್ತು ಎಷ್ಟು ಹಣ ಇತ್ತು, ಎಷ್ಟಕ್ಕೆ ಮಾರಿದಿರಿ, ಹೇಗೆ ಮಾರಿದಿರಿ ಎಂದು ಕೇಳಿದರೆ ಈ ರೀತಿ ಉತ್ತರ ಕೊಟ್ಟಿದ್ದಾರೆ,

I am quoting from the letter.

"Please refer to your letter dated 12th November 1987 asking certain information regarding sale of shares held by us in Chamundeshwari Sugars Ltd., The information that you have asked for refer to the transaction of which the public at large do not have accese. Therefore, it is not possible to furnish to you, the information that you require. Any how, the transaction has however been completed in the normal course."

ಅಧ್ಯಕ್ಷರು.— ಬ್ರೀಚ್ ಆಫ್ ಪ್ರಿವಿಲೇಜ್ ಬಗ್ಗೆ ಹೇಳಿ,

ಶ್ರೀ ಜಿ. ಮಾದೇಗೌಡ — ನಾನು ಹೆಚ್ಚಿಗೆ ಹೇಳುವುದಿಲ್ಲ.

ಅಧ್ಯಕ್ಷರು.— ಬ್ರೀಚ್ ಆಫ್ ಪ್ರಿವಿಲೇಜ್ ಹೇಗೆ ಆಗುತ್ತದೆ ಎನ್ನುವುದನ್ನು ಹೇಳಿ.

ಶ್ರೀ ಜಿ. ಮಾದೇಗೌಡ.— ಅಧ್ಯಕ್ಷರೆ, ನಾನು ಇವೊತ್ತೇ ಬ್ರೀಚ್ ಆಫ್ ಪ್ರಿವಿಲೇಜ್ ಬಗ್ಗೆ ನೋಟೀಸ್ ಕೊಟ್ಟಿದ್ದರೆ ಸಕಾಗಿತ್ತು. ಆದರೆ ನಾನು ನಿನ್ನೆಯೇ ಒಂದು ದಿವಸ ಮುಂಚಿತವಾಗಿಯೆ ಕೊಟ್ಟೆ ಏಕೆಂದರೆ ಮಂತ್ರಿಗಳು ತಯಾರಾಗಿ ಬರಬೇಕೆಂದು ಹೇಳಿ, ಮತ್ತೆ ನಾವು ಕೂಡ ತಯಾರಾಗಿ ಬೇರೆಯಾಗುತ್ತಲೆ ಏಕೆಂದರೆ ಅವರು ತಾನೇ ರೂಲಿಂಗ್ ಕೊಡುವುದು. ಇದನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸಬೇಕಾದರೆ ಆಧಾರ ಬೇಕಾಗುತ್ತದೆ. ನಾವು ನ್ಯಾಯ ಪೀಠದಲ್ಲಿ ಕುಳಿತಿರುವವರು. ನಾನು ನಂಬಿದ್ದೇನೆ. ಇದರಲ್ಲಿ ಆಧಾರ ಇದೆ ಇದರಲ್ಲಿ ತತ್ವ ಇದೆ. ಸುಪ್ರೀಮ್ ಕೋರ್ಟ್ ಡಿಸಿಷನ್ ಇದೆ. ಸರ್ಕಾರದ ಸ್ವತ್ತನ್ನು ಯಾರೋ ಬಂದು ಕೇಳಿದರು. ಎಂದು ಕೊಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಕೆಲವು ಫಾರ್ಮ್ಯಾಲಿಟೀಸ್ ಇವೆ.ಪೇಪರ್‌ನಲ್ಲಿ ಇದರ ಬಗ್ಗೆ ಪಬ್ಲಿಷ್ ಮಾಡಬೇಕು. ಪೇಪರ್‌ನಲ್ಲಿ ಅಡ್ವರ್ಟೈಸ್‌ಮೆಂಟ್ ಮಾಡಬೇಕು. ಯಾರು ಹೈಯಸ್ಟ್ ಷೇರು ಕೊಂಡುಕೊಳ್ಳುತ್ತಾರೆ ಅವರಿಗೆ ಕೊಡಬೇಕೆ ಏನಹ.....

"Any Government cannot sell away the Government property Without following the procedure. It is illegal." ಎಂದು ಸುಪ್ರೀಂ ಕೋರ್ಟ್ ಜಡ್ಜಮೆಂಟ್ ಇದೆ. ಮಾನ್ಯ ಪಟೇಲರು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಇದರ ಪೇರು ಮಾಡುವುದಿಲ್ಲ ಎಂದು ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಈ ಸದನದಲ್ಲಿಯೇ ಒಪ್ಪಿಕೊಂಡಿದ್ದಾರೆ. ಆದರೆ ಮೋಸಾಟ ಆಗಿದೆ. ಇದು ಎಲ್ಲಾ ದೃಷ್ಟಿಯಿಂದಲೂ ಈ ಸದನಕ್ಕೂ ಅಪಮಾನ ಮಾಡುವುದಲ್ಲದೆ ಆ ಭಾಗದ ರೈತರಿಗೆ ಮೋಸ ಮಾಡಿದ್ದೀರಿ ಎನ್ನುವಷ್ಟಾತನ್ನು ಹೇಳಬೇಕಾಗುತ್ತದೆ. ನಾನು ಮೊದಲನೆಯದಾಗಿ ರೈತನ ಮಗ ರೈತರಿಗೆ ದ್ರೋಹ ಮಾಡುವುದಿಲ್ಲ, ನಾನು ರೈತರ ಹಿತಾಸಕ್ತಿಯನ್ನು ಕಾಪಾಡುತ್ತೇನೆ ಮತ್ತು ಪ್ರಜಾಪ್ರಭುತ್ವ ತತ್ವಗಳು ಏನಿವೆ, ಆ ತತ್ವಗಳ ಪ್ರಕಾರ ಫ್ಯಾಕ್ಟರಿ ರೈತರ ಕೈಗೆ ಹೋಗಲೇಬೇಕು: ಹೋಗುವ ಹಾಗೆ ನಾನು ಮಾಡುತ್ತೇನೆ ಎನ್ನುವಷ್ಟಾತನ್ನು ಹೇಳಿದ್ದೀರಿ, ನೀವು ಇದ್ದಂಥ ಅಧಿಕಾರದಲ್ಲಿ ಇವೊತ್ತು ೧೩ ಲಕ್ಷ ರೂಪಾಯಿ ಕಡಿವಾಣ ಇದರ ಮೇಲೆ ನಾವು ಇಟ್ಟುಕೊಳ್ಳಬಹುದಾಗಿತ್ತು, ಆ ರೈಟ್ಸ್ ನೀವು ಕಳೆದುಕೊಂಡಿದ್ದೀರಿ. ಅದನ್ನು ಖಿತಕ್ಕೆ ಕಳೆದುಕೊಂಡಿದ್ದಾರೆಂದು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಈ ಸದನವನ್ನು ತಪ್ಪುದಾರಿಗೆಳೆದದ್ದೂ ಅಲ್ಲದೆ ರೈತನ ಮಗನ ಹಿತವನ್ನೂ ಇವರು ಬಲಿ ತೆಗೆದುಕೊಂಡಿದ್ದಾರೆಂದು ವಿಧಿಯಿಲ್ಲದೆ ನಾನು ಹೇಳಬೇಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ತಾವು ನ್ಯಾಯವಾದಿಗಳು. ಈ ವಿಷಯ ಪಕ್ಕಾಭಾವ್ಯತಾ ಸಮಿತಿಗೆ ಕಳುಹಿಸುವುದಕ್ಕೆ ಎಲ್ಲಾ ರೀತಿಯಿಂದಲೂ ಅರ್ಹವಾದುದು. ಆದ್ದರಿಂದ ಇದನ್ನು ತಾವು ಅದಕ್ಕೆ ಒಪ್ಪಿಸಿಕೊಳ್ಳುತ್ತೀರೆಂದು ಅಂದುಕೊಂಡಿದ್ದೇನೆ. ಮಾನ್ಯ ಪಟೇಲ್‌ರವರೂ ಕೂಡ ಇದನ್ನು ನನ್ನ ಕಾಲದಲ್ಲಿಯೇ ರೈತರ ಫ್ಯಾಕ್ಟರಿಯನ್ನಾಗಿ ಮಾಡುತ್ತೇನೆಂದು ಒಪ್ಪಿಕೊಂಡಿದ್ದರು. ಆದರೆ ಅವರು ಆ ರೀತಿ ಮಾಡತಕ್ಕ ಅಧಿಕಾರವನ್ನು ಇವತ್ತು ಕಳೆದುಕೊಂಡಿದ್ದಾರೆ. ಮತ್ತು ಈ ಮನೆಯ ಗೌರವವನ್ನೂ ಹಾಗೂ ಆ ಭಾಗದ ರೈತರ ಹಿತವನ್ನು ಬಲಿ ತೆಗೆದುಕೊಂಡಿದ್ದಾರೆಂದು ನಾನು ಹೇಳುತ್ತಿದ್ದೇನೆ. ಈ ವಿಚಾರವನ್ನು ತಾವು ದೀರ್ಘವಾಗಿ ಆಲೋಚನೆ ಮಾಡಿ, ಇದನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ — ಮಾನ್ಯ ಅಧ್ಯಕ್ಷರೇ ತಾವು ನನ್ನನ್ನು ಕರೆಯಿಸಿ ಈ ವಿಷಯದ ಬಗ್ಗೆ ಈ ರೀತಿಯ ನೋಟೀಸ್ ಬಂದಿದೆಯೆಂದು ಹೇಳಿದ್ದರಿಂದ ನಾನು ಇಲ್ಲಿಗೆ ಬಂದಿದ್ದೇನೆ. ಇದು ಪ್ರಿವಿಲೇಜ್ ನೋಷನ್‌ಗೆ ಬರುವುದಿಲ್ಲ. ಇದು ಟೆಕ್ನಿಕಲ್ ಆಗಿ ಪ್ರಿವಿಲೇಜ್ ಆಗುತ್ತದೆ ಅಥವಾ ಇಲ್ಲ ಎನ್ನತಕ್ಕ ವಾದವನ್ನು ಮಾಡುವುದಕ್ಕೆ ನಾನು ಹೋಗುವುದಿಲ್ಲ ಆದರೂ ಅವರು ಏನು ವಿಷಯ ಹೇಳಿದ್ದಾರೆ ಅದಕ್ಕೆ ಮಾತ್ರ ಸಂಬಂಧಪಟ್ಟಂತೆ ನಾನು ಉತ್ತರವನ್ನು ಕೊಡುತ್ತೇನೆ. ೧೯೮೫ರಲ್ಲಿ ಅವರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದರು ಎಂದರೆ (೧೯೮೫ರಲ್ಲಿ ಮಾನ್ಯ ಸದಸ್ಯರು ಕೇಳಿದ್ದ ಪ್ರಶ್ನೆ)

> "ಮದ್ದೂರು ತಾಲ್ಲೂಕು ಕಾಳಮುದ್ದನ ದೊಡ್ಡಿ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರು ಸರ್ಕಾರದೊಡನೆ ರಾಜ್ಯದ ಪಣಕಾಸು ನಿಗಮ ಉದಾಹರಣೆಗೆ ರಾಜ್ಯ ಕೈಗಾರಿಕಾ ಬಂಡವಾಳ ನಿಗಮ ಹಾಗೂ ಮೈಸೂರು ಸಕ್ಕರೆ ಕಾರ್ಖಾನೆ ಹೂಡಿರುವ ಬಂಡವಾಳಗಳನ್ನು ಕೊಡುಕೊಳ್ಳಲು ಸರ್ಕಾರದೊಡನೆ ಪರಿಶೀಲಿಸುತ್ತಿರುವುದು ನಿಜವೇ"

ಎಂದು ಕೇಳಿದ್ದಾರೆ. ಇದಕ್ಕೆ ನಾನು "ಇಲ್ಲ" ಎಂದು ಉತ್ತರವನ್ನು ಕೊಟ್ಟಿದ್ದೇನೆ. ಏಕೆಂದರೆ ಕೆಲವು ವರ್ಷ ಇದು ಬಹಳ ಕೆಟ್ಟ ಪರಿಸ್ಥಿತಿಯಲ್ಲಿತ್ತು. ಇದರ ಬಗ್ಗೆ ನಾನೂ ಮತ್ತು ಮಾನ್ಯ ಮಾದೇಗೌಡರೂ ಕುಳಿತು ಸಾಕಷ್ಟು ಮಾತನಾಡಿದ್ದೇವೆ ಇದು ಕೋ-ಆಪರೇಟೀವ್ ಅಲ್ಲ.

This is under Joint Sector Companies Act I am giving the share details, here below. ಈ ಕಾರ್ಖಾನೆಯನ್ನು ಪ್ರಾರಂಭ ಮಾಡಿದ್ದೂ ಇವರೇ, ಕೋ-ಆಪರೇಟಿವ್ ಸೆಕ್ಟಾರ್‌ನಲ್ಲಿ ಮಾಡಬೇಕೆಂದು ಪೇರುಗಳನ್ನು ಕಲೆಕ್ಟ್ ಮಾಡಿ ಅದು ಆಗದೇ ಹೋಗಿ, ಅನಂತರ ಅದನ್ನು ಕನ್ವರ್ಟ್ ಮಾಡಿ ಜಾಯಿಂಟ್ ಸ್ಟಾಕ್ ಕಂಪೆನೀಸ್ ಆಕ್ಟ್ ಪ್ರಕಾರ ನಡೆಸುತ್ತಿದ್ದಾರೆ ಯಾರು ಪೇರನ್ನು ತೆಗೆದುಕೊಂಡಿದ್ದಾರೆ ಅವರೇ ಇದರ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ನಡೆಸುತ್ತಿದ್ದಾರೆ ಅನಂತರ ಇವರು ರೈತರ ಹತ್ತಿರ ಒಂದೊಂದೇ ಪೇರುಗಳನ್ನು ಕೊಂಡುಕೊಂಡರು. ಸಾಮಾನ್ಯವಾಗಿ ಸಕ್ಕರೆ ಕಾರ್ಖಾನೆಗಳು ರಾಜ್ಯದಲ್ಲಿ ಬಹಳ ತೊಂದರೆಯಲ್ಲಿದ್ದವು. ಅದರಲ್ಲೂ ಇದಂತೂ ಬಹಳ

ತೊಂದರೆಯಲ್ಲಿತ್ತು. ಈಗ ಅವರು ಬಹಳ ಬುದ್ಧಿವಂತಿಕೆಯಿಂದ ಕೆ. ಎಸ್. ಐ. ಐ.ಡಿ. ಸಿ. ಯಲ್ಲಿ ನಿಮ್ಮ ಷೇರ ಗಳನ್ನು ಕೊಡುತ್ತೀರಾ ಎಂದರು. ನಾನು ರೆಕಾರ್ಡನ್ನು ತರಿಸಿ ನೋಡಿದ ಮೇಲೆ ನೀವುಎಷ್ಟಕ್ಕೆ ಷೇರುಗಳನ್ನು ತೆಗದುಕೊಳ್ಳುತ್ತೀರಿ ಎಂದಂ ಕೇಳಿದಾಗ ೧೦ ರೂಪಾಯಿಯ ಷೇರನ್ನು ೬ ರೂಪಾಯಿಗೋ ೭ ರೂಪಾಯಿಂಗೋ ಕೊಡಿ ಎಂದು ಕೇಳಿದರು. ಆಗ ನಾವು ಕೊಡುವುದಿಲ್ಲ ಎಂದು ಅವರು ಹೇಳಿದರು. ನಾನು ಬಂದ ಮೇಲೆ ಇದನ್ನು ನಾವು ಏತಕ್ಕೆ ಕೊಡಬೇಕಂ ಎಂದು ಹೇಳಿ ಈ ತೀರ್ಮಾನವನ್ನು ತೆಗೆದುಕೊಂಡಿದ್ದೆ. ನಾವು ಸರ್ಕಾರದಲ್ಲಿ ಬಂದು ಪಾಲಿಸಿಯನ್ನು ಮಾಡಿದ್ದೇವೆ. ಡಿಸ್ ಇನ್‌ವೆಸ್ಟ್‌ಮೆಂಟ್ ಬಗ್ಗೆ ನಾನು ಹೇಳಿದ್ದೇನೆ. ಎಲ್ಲಿ ನಷ್ಟವನ್ನು ಹೊಂದತಕ್ಕ ಕಂಪೆನಿಗಳಿವೆ ಅಲ್ಲಿ ನಾವು ಹಾಕಿರತಕ್ಕ ಬಂಡವಾಳವನ್ನು ವಾಪಸು ತೆಗೆದುಕೊಂಡು ಬೇರೆ ಕಡೆ ಇನ್‌ವೆಸ್ಟ್ ಮಾಡಬೇಕೆಂದು ಹೇಳಿದ ಮೇಲೆ ಮೊರಾರ್ಜಿ ಅವರ ಕಂಪೆನಿಯಲ್ಲಿ ೧೦ ಲಕ್ಷ ಷೇರುಗಳು ಇತ್ತು ಇದೇ ರೀತಿ ಇನ್ನೂ ಬಹಳ ಕಂಪೆನಿಗಳಲ್ಲಿ ನಾವು ಷೇರುಗಳನ್ನು ಹಾಕಿದ್ದೇವೆ. ನಮಗೆ ನಮ್ಮ ಷೇರು ವಾಪಸು ಬರತಕ್ಕ ಸಂದರ್ಭದಲ್ಲಿ, ಅಂಥ ಪ್ರಸಂಗ ಬಂದಾಗ ವಿ ವಿಲ್ ಏತ್‌ಡ್ರಾ ದನ್

ಮಾನ್ಯ ಮಾದೇಗೌಡರು ಸೀರಿಯಸ್ ಆಗಿ ಏನೋ ರೈತರದು ನಡೆದಿದೆ ಎಂದು ಹೇಳಿದರು. ರೈತರ ಷೇರು ೪೨ ಪರ್ಸೆಂಟ್ ಇದೆ. ಕೆ. ಎಸ್. ಐ. ಡಿ. ಸಿ. ದು ೭ ಪರ್ಸೆಂಟ್ ಇದೆ, ಶುಗರ್ ಕಂಪೆನಿದು ೩ ಪರ್ಸೆಂಟ್ ಇದೆ. 7% has been bought over by Sakthi Sugare ltd, who have nearly 20% of the shares. ಈ ೨೦ ಪರ್ಸೆಂಟ್ ಷೇರ್ಸ್‌ಗಳಿಗೆ ೭ ಪರ್ಸೆಂಟ್ ಶೇರ್ಸ್ ಗಳನ್ನು ಸೇರಿಸಿ ಮಾರಾಟ ಮಾಡಿದ್ದಾರೆ. ಮೊದಲು ೭ ರೂಪಾಯಿಗಳಿಗೆ ಕೇಳುತ್ತಿದ್ದುದು ಈಗ ೧೩ ರೂಪಾಯಿಗಳಿಗೆ ಕೊಂಡು ಕೊಂಡಿರುತ್ತಾರೆ. ಇದರಲ್ಲಿ ಯಾವ ದುರುದ್ದೇಶವೂ ಇಲ್ಲ. ರೈತರು ಕೊಟ್ಟಿರುವುದಕ್ಕೆ ಕಡಿಮೆ ಮಾಡಬೇಕೆನ್ನುವ ದುರುದ್ದೇಶವಿಲ್ಲ. ರೈತರು ಸ್ವತಃ ಶೇರು ಮಾರಾಟ ಮಾಡುತ್ತಿದ್ದಾರೆ, ನಾನು ಷೇರನ್ನು ಮಾರಾಟ ಮಾಡಬೇಡಿ ಎಂದು ಹೇಳಿದರೆ ಅವರು ಕೇಳುತ್ತಾರೆಯೇ ? ರೈತರು ಸ್ವಯಂ ತಮ್ಮ ಶೇರುಗಳನ್ನು ಮಾರಾಟ ಮಾಡುತ್ತಿದ್ದಾರೆ. ಕೆ. ಎಸ್. ಐ. ಡಿ. ಸಿ. ಮುಳುಗಿ ಹೋಗಬಹುದು, ಮತ್ತೊಂದು ಆಗಬಹುದು. ಅದಕ್ಕೆ ಯಾರು ರೈತರು ಇರುತ್ತಾರೆ ಅವರಿಗೆ ಅನುಕೂಲ ಮಾಡಬೇಕು ಎನ್ನುವ ದೃಷ್ಟಿಯೇ ಹೊರತು ಮಾನ್ಯ ಮಾದೇಗೌಡರು ಹೇಳಿದಂತೆ ಅ ನ್ಯಾಯ ಮಾಡಬೇಕೆಂಬ ಉದ್ದೇಶವಿಲ್ಲ, ಇದರಿಂದಾಗಿ ತಪ್ಪು ತಿಳುವಳಿಕೆ ಕೊಡಬೇಕಾಗುತ್ತದೆ. ಇವತ್ತು ಹೇಳಿದರು ಸರ್ಕಾರಿ ನೀತಿಗೆ ಅನುಗುಣವಾಗಿ ಹಣಕಾಸಿನ ಸಂಸ್ಥೆಗಳು ತಮ್ಮ ಬಂಡವಾಳವನ್ನು ಉಳಿಸಿಕೊಳ್ಳುವಸಲುವಾಗಿ ಬೇರೆ ಕಂಪೆನಿಗಳಿಗೆ ಹೋಗಿ ಷೇರನ್ನು ಮಾರಾಟ ಮಾಡಿದ್ದಾರೆ, ಅದೇ ಪ್ರಕಾರ ಇದನ್ನು ಮಾರಾಟ ಮಾಡಿರುವುದರಿಂದ ಮೊದಲನೆಯದಾಗಿ ಇದು ಪ್ರಿವಿಲೇಜ್ ಆಗುವುದಿಲ್ಲ, ಮಾನ್ಯ ಮಾದೇಗೌಡರಿಗೆ ಪ್ರತಿಯೊಂದೂ ಸ್ವತಃ ಗೊತ್ತಿದೆ, ರೈತರು ಶೇರು ಮಾರಾಟ ಮಾಡುವುದನ್ನು ತಪ್ಪಿಸುವುದಕ್ಕೆ ಪೋಲೀಸ್ ಹಾಕಿ ಬೇಡವೆಂದು ಹೇಳುವುದಕ್ಕೆ ಆಗುತ್ತದೆಯೇ, ಅವರೇ ಜನರನ್ನು ಕರೆಯಿಸಿ ಏನಾದರೂ ಮಾಡಲಿ. ಅದಕ್ಕೆ ನಾನು ಅವರನ್ನು ತಪ್ಪುದಾರಿಗೆ ಎಳೆದಿದ್ದೇನೆ ಅವರಿಗೆ ಅನ್ಯಾಯ ಮಾಡಿದ್ದಕ್ಕೋಸ್ಕರವಾಗಿ ಉತ್ತರ ಹೇಳಲಿಲ್ಲ ಎಂದರೆ ಹೇಗಾಗುತ್ತದೆ ಈಗ ವಸ್ತು ಸ್ಥಿತಿ ಹೀಗಿದೆ ಫೈನಾನ್ಷಿಯಲ್ ವಿಂಡ್ ಅವರಿಗೆ ಇದೆ. ಹಣಕಾಸಿನ ಸಂಸ್ಥೆಗಳವರು ಮಾರಾಟ ಮಾಡಿದ್ದಾರೆ.

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಪಟೇಲರು ಏನು ಹೇಳುತ್ತಿದ್ದಾರೆಂದರೆ ನಾವು ಯಾರನ್ನು ತಪ್ಪುದಾರಿಗೆ ಎಳೆಯಬೇಕೆನ್ನುವ ದೃಷ್ಟಿ ಇಲ್ಲವೆಂದು ಹೇಳಿದರು. ತಾವು ಹಣವನ್ನು ಹಾಕಿದ್ದೀರಿ ವಾಪಸ್ ಹಣವನ್ನು ತೆಗೆದುಕೊಳ್ಳುತ್ತೀರಿ. ಆದರೆ ಆದಕ್ಕೆ ಸುಪ್ರೀಂಕೋರ್ಟ್ ಡಿಸಿಷನ್ ಸರ್ಕಾರ ಆಸ್ತಿಯನ್ನು ಮಾರಾಟ ಮಾಡುವಾಗ ಪಬ್ಲಿಸಿಟಿ ಕೊಡಬೇಕೆಂದು ಇದೆ. ಸರ್ಕಾರಿ ವ್ಯವಹಾರ ಗಳನ್ನು ಈ ರೀತಿ ನಡೆಸುವುದಕ್ಕೆ ಆಗುತ್ತದೆಯೇ ? ನನ್ನ ದೃಷ್ಟಿಯಲ್ಲಿ ಇದು ಪ್ರಿವಿಲೇಜ್ ಆಗುತ್ತದೆ ನಾವು ಮಾರಾಟ ಮಾಡುವುದಿಲ್ಲ, ರೈತರ ಶೇರು ಜಾಸ್ತಿಯಾಗಿರುತ್ತದೆ ಆದ್ದರಿಂದ ಅದು ರೈತರ ಕೈಗೆ ಹೋಗಬೇಕು ಎನ್ನುವುದನ್ನು ಹೇಳಬೇಕಾಗಿತ್ತು. ಮಾರಾಟ ಮಾಡಿರುವುದು ಪ್ರಿವಿಲೇಜ್ ಕಮಿಟಿಗೆ ಹೋಗದೆ ಇದ್ದರೆ ಪ್ರಿವಿಲೇಜ್ ಕಮಿಟಿಗೆ ಏನು ಕೆಲಸ ? ಇದು ಪ್ರಿವಿಲೇಜ್ ಕಮಿಟಿಗೆ ಹೋಗಲಿ ದಯವಿಟ್ಟು ರೆಫರ್ ಮಾಡಿ, ಅಲ್ಲಿ ವಿಚಾರಣೆ ನಡೆಯಲಿ. ದಯವಿಟ್ಟು ಮಾನ್ಯ ಪಟೇಲ್‌ರವರು ಇದಕ್ಕೆ ಒಪ್ಪಿಕೊಳ್ಳಬೇಕು. ಪ್ರಜಾ ಪ್ರಭುತ್ವದಲ್ಲಿ ತಪ್ಪು ಮಾಡಿರುವವರು ಆ ಸ್ಥಾನದಲ್ಲಿ ಕುಳಿತುಕೊಂಡಿರುತ್ತಾರೆ

ಶ್ರೀ ಜೆ. ಎಚ್. ಪಟೀಲ್.—ತಪ್ಪಾಗಿದ್ದರೆ ಇಲೀಗಲ್ ಆಕ್ಟ್ ಆಗಿದ್ದರೆ ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆ, ಮಾನ್ಯ ಮಾದೇಗೌಡರು ಸೀರಿಯಸ್ ಆಗಿ ಯಾವುದೋ ಒಂದು ವಿಚಾರವನ್ನು ಗಂಭೀರವಾಗಿ ಪ್ರಸ್ತಾಪ ಮಾಡುತ್ತಾ ಹೇಳಿದ್ದರೆ ಸ್ಟೈಟ್ ಅವೆ, ನಾವು ಸರಿ ಎಂದು ಹೇಳಿ ಬಿಡುತ್ತೇವೆ. ನಾವು ಹೇಳಿ ಬಿಟ್ಟಾಕ್ಷಣಕ್ಕೆ ಇದು ಬ್ರೀಚ್ ಆಗುತ್ತದೆಯೇ ?

ಆದ್ದರಿಂದ ಇದರ ಬಗ್ಗೆ ಮತ್ತೆ ಪ್ರಸ್ತಾಪ ಮಾಡುವ ಅವಶ್ಯಕತೆ ಇಲ್ಲ. ಇದು ಬ್ರೀಚ್ ಆಫ್ ಪ್ರಿವಿಲೇಜ್ ಆಗುವುದಿಲ್ಲ. ರೈತರಿಗೇ ಆಗಲಿ, ಮಾದೇಗೌಡರಿಗೇ ಆಗಲಿ ಅನ್ಯಾಯ ಮಾಡಿತಕ್ಕ ಉದ್ದೇಶ ಅಲ್ಲ. ಇದು ಹಣಕಾಸಿನ ಸಂಸ್ಥೆ. ಇದರಲ್ಲಿ ಷೇರು ವ್ಯಾಪಾರ ಮಾಡುತ್ತಾರೆ.

ಶ್ರೀ ಜಿ. ಮಾದೇಗೌಡ.— ಇವರು ೭–೮ ರೂಪಾಯಿನಂತೆ ಷೇರನ್ನು ವ್ಯಾಪಾರ ಮಾಡಿಕೊಂಡಿದ್ದಾರೆ ನಾನು ೧೦ ರೂಪಾಯಿ ಕೊಡಿಸುತ್ತೇನೆ, ರೈತರಿಗೆ ಷೇರುಗಳನ್ನು ಕೊಡಿಸಿ. ರೈತರಿಗೆ ಅನ್ಯಾಯವಾಗಿಲ್ಲವೆಂದು ಹೇಳುತ್ತಿದ್ದಾರೆ...

ಅಧ್ಯಕ್ಷರು.— ನೀವು ಒಂದು ಕೆಲಸ ಮಾಡಿ. ಇದರ ಬಗ್ಗೆ ಚರ್ಚೆ ಮಾಡುವುದಿದ್ದರೆ ನಿಮಗೆ ಬೇರೆ ಅವಕಾಶ ಮಾಡಿಕೊಡುತ್ತೇನೆ. ಆದರೆ ನೀವು ಈಗ ಏನು ಹಕ್ಕುಬಾಧ್ಯತಾ ಸೂಚನೆಯನ್ನು ತಂದಿದ್ದೀರಿ ಅದಕ್ಕೆ ಅನುಮತಿಯನ್ನು ನಾನು ನಿರಾಕರಿಸಿದ್ದೇನೆ. ನೀವು ಬೇರೆ ರೀತಿ ಸೂಚನೆ ಕೊಡಿ, ಅವಕಾಶ ಕೊಡುತ್ತೇನೆ. ಮಾನ್ಯ ಧರ್ಮಸಿಂಗ್‌ರವರೆ ಪ್ರಾರಂಭಿಸಿ.

ನಿಯಮ 68ರ ಮೇರೆಗೆ

ತೆಲುಗು-ಗಂಗಾ ಯೋಜನೆಯ ಬಗ್ಗೆ

ಶ್ರೀ ಧರ್ಮಸಿಂಗ್ (ಜೇವರ್ಗಿ).— ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಪ್ರಸ್ತಾಪ ಮಾಡಿದ ಹಾಗೆ ಕೃಷ್ಣ ಪ್ರಾಜೆಕ್ಟನ್ನು ಸರ್ಕಾರದವರು ಬಹಳ ನಿರ್ಲಕ್ಷ್ಯ ಮಾಡಿದ್ದಾರೆ, ಮತ್ತು ಇದಕ್ಕೆ ಯಾವ ರೀತಿಯಾಗಿ ಹಣವನ್ನು ಒದಗಿಸಬೇಕಾಗಿತ್ತು ಆ ರೀತಿ ಹಣವನ್ನು ಒದಗಿಸಿಲ್ಲವೆಂದು ಈಗಾಗಲೇ ಹೇಳಿದ್ದೇನೆ. ಇದರ ಬಗ್ಗೆ ಈಗ ಕೆಲವು ವಿವರಗಳನ್ನು ನಾನು ಕೊಡಬಯಸುತ್ತೇನೆ. ಅಪ್ಪರ್ ಕೃಷ್ಣ ಪ್ರಾಜೆಕ್ಟ್ ೧೯೬೩ರಲ್ಲಿ ಪ್ರಾರಂಭವಾಯಿತು Estimated cost was Rs. 58 02 crores, area to be irrigated, 6 lakh acres. Revised in 1978, that is after 15 years, estimated cost was Rs. 283.65 crores, area targeted 4.25 lakh hec ares. Modified revision was done in 1985, estimated cost was Rs. 1,071.10 crores. area targeted was 4.25 lakh hectares. targeted completion 1995-96. Amount provided in the budget for the whole of Upper Krishna Project. ೧೯೬೩ರಲ್ಲಿ ಪ್ರಾರಂಭವಾದ ಅಪ್ಪರ್ ಕೃಷ್ಣ ಪ್ರಾಜೆಕ್ಟಿಗೆ ೧೯೬೩ರಿಂದ ೧೯೮೮ರವರೆಗೆ ಒಟ್ಟು ಪ್ರೊವೈಡ್ ಮಾಡಿದ ಹಣ ೫೩೫.೨೪ ಕೋಟಿ ರೂಪಾಯಿಗಳು. ಅದರಲ್ಲಿ ವಾಸ್ತವವಾಗಿ ಬಿಡುಗಡೆ ಮಾಡಿದ ಹಣ ೪೪೯.೩ ಕೋಟಿ ರೂಪಾಯಿಗಳು. ಅದರಲ್ಲಿ ೪೪೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇವತ್ತು ೪ ೨೫ ಲಕ್ಷ ಹೆಕ್ಟೇರ್ ಜಮೀನಿಗೆ ನೀರು ಕೊಡಬೇಕಾಗಿದ್ದರೆ ಅದು ಕೇವಲ ೧.೭ ಲಕ್ಷ ಹೆಕ್ಟೇರ್ ಭೂಮಿಗೆ ನೀರು ಕೊಡತಕ್ಕ ಪರಿಸ್ಥಿತಿಯಲ್ಲಿದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇಲ್ಲೂ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆಂದು ಹೇಳುತ್ತಿದ್ದೇನೆ. ಇವತ್ತು ಕೃಷ್ಣ ಬೇಸಿನ್‌ನಲ್ಲಿರತಕ್ಕ ಪ್ರಾಜೆಕ್ಟಿಗೆ ಹಣ ಕೊಡ ಬೇಕಾಗಿದೆ. ಅಪ್ಪರ್ ಕೃಷ್ಣ ಪ್ರಾಜೆಕ್ಟಿಗೆ ನೇರವಾಗಿ ಏನು ಹಣ ಇಟ್ಟಿದ್ದೀರಿ ೨ದು ರಿವೈಸ್ ಆಗಿ ೨ ಸಾವಿರ ಕೋಟಿ ರೂಪಾಯಿ ಆಗುತ್ತದೆ. ಆದರಲ್ಲಿ ನೀವು ೪೪೪ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿ ೪.೭೫ ಲಕ್ಷ ಹೆಕ್ಟೇರ್ ಜಮೀನಿಗೆ ನೀರು ಒದಗಬೇಕಾದ ಜಾಗದಲ್ಲಿ ೧.೭೫ ಲಕ್ಷ ಹೆಕ್ಟೇರಿಗೆ ಮಾತ್ರ ಒದಗಿಸುತ್ತಿದ್ದೀರಿ. ೧೯೮೭-೮೮ರಲ್ಲಿ ಸರ್ಕಾರ ಪ್ರೊವೈಡ್ ಮಾಡಿದ್ದು ೮೫ ಕೋಟಿ ರೂಪಾಯಿಗಳಾದರೆ ಕೊಟ್ಟಿದ್ದು ೨೭.೯೮ ಕೋಟಿ ರೂಪಾಯಿಗಳು ಮಾತ್ರ. ಅದರಲ್ಲಿ ಎಸ್ಟಾಬ್ಲಿಷ್‌ಮೆಂಟ್ ಎಲ್ಲಾ ಬಂತು ೮೭–೮೮ರಲ್ಲಿ ೮ ಕೋಟಿ ರೂಪಾಯಿಗಳನ್ನು ಬಡ್ಜೆಟ್‌ನಲ್ಲಿ ಪ್ರೊವೈಡ್ ಮಾಡಿದರೂ ೨೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿಲ್ಲ. ಈ ರೀತಿ ಅಪ್ಪರ್